**2ನೇ ಹೆಚ್ಚುವರಿ ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**

**ಸಾಃ ಗೋಕಾಕ.**

ಸಿ.ಸಿ ನಂಃ 523/2009

ಸಿಡಬ್ಲೂ ಃ 6 ಪಿಡಬ್ಲೂ ಃ 2

| | |
|---|---|
| ಸಾಕ್ಷಿದಾರರ ಹೆಸರು | ಃ- ಎಸ್ ಜಿ ಶಿಂಧೆ |
| ವಯಸ್ಸು | ಃ- 52 ವರ್ಷ |
| ಉದ್ಯೋಗ | ಃ- ಅಬಕಾರಿ ರಕ್ಷಕ |
| ಸಾಕೀನ | ಃ- ಗೋಕಾಕ |

**ದಿಃ 04-01-2017 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸ.ಸ.ಅ. ರವರಿಂದ ;**

ನಾನು 2008 ರಿಂದ ಇಲ್ಲಿಯವರೆಗೆ ಅಬಕಾರಿ ರಕ್ಷಕ ಆಗಿ ಅಬಕಾರಿ ಕಛೇರಿಯಲ್ಲಿ ಕೆಲಸ ಮಾಡಿದ್ದೇನೆ.

ದಿಃ 08-05-2008 ರಂದು ಬೆಳಿಗ್ಗೆ 7-00 ಗಂಟೆಗೆ ಗೋಕಾಕ ಅಬಕಾರಿ ಕಛೇರಿ ಬಿಟ್ಟು ನಾನು, ಚಾಸಾ 1, 5 ಮತ್ತು ಇಬ್ಬರು ಪಂಚರೊಂದಿಗೆ ಸರ್ಕಾರಿ ವಾಹನದಲ್ಲಿ 2008 ರ ವಿದಾನಸಭಾ ಚುನಾವಣೆ ಪ್ರಯುಕ್ತ ಶಿಲ್ತಿಭಾವಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಶಿಲ್ತಿಭಾವಿಯ ಯಲ್ಲಪ್ಪ ಹಣಮಂತಪ್ಪ ಮಾಡಮ್‌ಗೇರಿ ಇವರ ಮನೆಯಲ್ಲಿ ಅಕ್ರಮ ಮಧ್ಯ ತಯಾರಿಕೆ ಮಾಡುತ್ತಿದ್ದಾರೆಂಬ ಖಚಿತ ಬಾತ್ಮಿ ಬಂದ ಮೇರೆಗೆ ನಂತರ ಗ್ರಾಮದ ಜನರನ್ನು ವಿಚಾರಿಸುತ್ತಾ ನಾವು ಆರೋಪಿತನ ಮನೆಯ ಮುಂದೆ ಸರ್ಕಾರಿ ಜೀಪನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿದೆವು. ಅಷ್ಟರಲ್ಲಿ ನಾವು ಸಮಸ್ತ್ರ ಧರಿಸಿದ್ದನ್ನು ನೋಡಿ ಆ ಮನೆಯಿಂದ ಒಬ್ಬ ವ್ಯಕ್ತಿ ಓಡಿ ಹೋದನು. ನಂತರ ಆತನ ಮೇಲೆ ಸಂಶಯ ಪಟ್ಟು ಮನೆಯನ್ನು ತಪಾಸಣೆ ಮಾಡಿದಾಗ ಆತನ ಮನೆಯ 2 ನೇ ಕೋಣೆಯಲ್ಲಿ 2 ಬಿಳಿ ಮಧ್ಯಸಾರ ವಾಸನೆಯುಳ್ಳ ಕ್ಯಾನುಗಳು, 12 ಪ್ಲಾಸ್ಟಿಕ್ ಟ್ರೇಗಳು, 3 ಬೂಚಗಳು (ಕ್ಯಾಪ್‌ಗಳು), 200 ಓರಿಜಿನಲ್ ಚಾಯ್ಸ್ ಕಂಪನಿಯ ಲೇಬಲ್‌ಗಳು ಕಂಡುಬಂದವು.

ನಂತರ ಚಾಸಾ 1 ರವರು ಅಲ್ಲಿದ್ದ ಜನರನ್ನು ವಿಚಾರಿಸಿದಾಗ ಆರೋಪಿಯ ಹೆಸರು ಯಲ್ಲಪ್ಪ ಹಣಮಂತಪ್ಪ ಮಾಡಮ್‌ಗೇರಿ ಎಂದು ಹೇಳಿದರು. ಮನೆ ನಂ. ಆರ್‌ಐ 166 ಇತ್ತು. ನಂತರ ಚಾಸಾ 1 ರವರು ಪಂಚರ ಸಮಕ್ಷಮ ಮುಂಜಾನೆ 8-40 ರಿಂದ 9-40 ರವರೆಗೆ ಜಪ್ತಿ ಪಂಚನಾಮೆ ಮಾಡಿ ಸದರಿ ಮು.ಮಾ. ಗಳನ್ನು ಜಪ್ತು ಪಡಿಸಿಕೊಂಡರು. ರೇಡ್ ಪಂಚನಾಮೆ ಯನ್ನು ಚಾಸಾ 1 ರವರು ಹೇಳಿದ ಪ್ರಕಾರ ನಾನೇ ಬರೆದಿರುತ್ತೇನೆ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

ಸದರಿ ಮು.ಮಾ.ಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವ ಬಗ್ಗೆ ತಕರಾರು ಮಾಡಿರುವುದಿಲ್ಲ)

**ಪಾಟೀ ಸವಾಲು : ಆರೋಪಿ ಪರ (ಎಸ್ ಎಸ್ ಎನ್) ವಕೀಲರಿಂದ :**

ಪಂಚನಾಮೆ ಬರೆದವರು ದಸ್ತೂರ್ ಎಂದು ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿ ನಾನು ದಸ್ತೂರ್ ಎಂದು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ 1ರಲ್ಲಿ ಜಪ್ತಿಪಡಿಸಿಕೊಂಡ ಬಗ್ಗೆ ಎಲ್ಲೂ ನಮೂದಿಸಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ತಾಬಾ ತೆಗೆದುಕೊಂಡಿರುತ್ತೇವೆ ಎಂದು ನಮೂದಿಸಿದ್ದೇವೆಂದು ನುಡಿದಿರುತ್ತಾರೆ. ಯಾವುದೇ ಜಪ್ತಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ನಮೂಸಿದ ಇಬ್ಬರು ಪಂಚರು ಅನುಕ್ರಮವಾಗಿ ಬಸಳಿಗುಂದಿ ಮತ್ತು ಗೋಕಾಕನವರು ಆಗಿರುತ್ತಾರೆ. ಬಸಳಿಗುಂದಿ ಗೋಕಾಕದಿಂದ 6 ಕಿ.ಮಿ. ದೂರ ಇದೆ ಎಂದರೆ ಸರಿ. ಸದರಿ ಪಂಚರನ್ನು ಕರೆಯಲು ಯಾರೂ ಹೋಗಿರುವುದಿಲ್ಲ ಆದರೆ ಫೋನಿನ ಕರೆಯ ಮೂಲಕ ಕರೆಸಿರುತ್ತೇವೆ. ಸದರಿ ಪಂಚರಿಗೆ ಚಾಸಾ 1 ರವರು ಬೆಳಿಗ್ಗೆ 7-00 ಗಂಟೆಗೆ ಫೋನ್ ಮಾಡಿ ಕರೆಸಿರುತ್ತಾರೆ. ಶೇತ್ಕಿಭಾವಿ ಗ್ರಾಮವು ಗೋಕಾಕದಿಂದ 30 ಕಿ.ಮಿ. ದೂರ ಇರುತ್ತದೆ. 40 ನಿಮಿಷದಲ್ಲಿ ಸದರಿ ಸ್ಥಳಕ್ಕೆ ಹೋಗಬಹುದು. ಅಂದು ನಾವು ಬೆಳಿಗ್ಗೆ 7-50 ಕ್ಕೆ ಹೋದೆವು. ಶೇತ್ಕಿಭಾವಿ ಸಣ್ಣ ಹಳ್ಳಿ ಎಂದರೆ ಸರಿ.

ಸದರಿ ಬಾತ್ಮಿ ಎಷ್ಟು ಗಂಟೆಗೆ ಮತ್ತು ಯಾವ ಸ್ಥಳದಲ್ಲಿದ್ದಾಗ ಬಂತು ಎಂದು ನೆನಪಿಲ್ಲ. ಆರೋಪಿ ಮನೆ ವಿಳಾಸದ ವಿಚಾರವಾಗಿ 2-3 ಜನರನ್ನು ಕೇಳಿರುತ್ತೇವೆ. ಅವರ ಹೆಸರು ಹೇಳಲು ನೆನಪಿಲ್ಲ.

ಅಂದು ನಮ್ಮ ಸರ್ಕಾರಿ ಜೀಪನ್ನು ಅಶೋಕ ಹರಿಜನ ರವರು ಚಲಾಯಿಸುತ್ತಿದ್ದರು. ಸದರಿ ಚಾಲಕ ನಮ್ಮ ಕಚೇರಿಯಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರೆದು ಅವರು ನಮ್ಮ ಇಲಾಖೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಸದರಿಯವರು ಯಾವ ವರ್ಷದಿಂದ ಯಾವ ವರ್ಷದವರೆಗೂ ಕೆಲಸ ಮಾಡುತ್ತಿದ್ದಾರೆಂದು ಹೇಳಲು ನೆನಪಿಲ್ಲ.

ಆರೋಪಿ ಮನೆಯ ಚಕ್‌ಬಂದಿ ಹೇಳಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಜಪ್ತಿಪಡಿಸಿಕೊಂಡ ಬಗ್ಗೆ ಎಲ್ಲೂ ನಮೂದಿಸಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಮುಂದಿನ ತನಿಖೆಗಾಗಿ ತಾಬಾ ತೆಗೆದುಕೊಂಡಿರುತ್ತೇವೆ ಎಂದು ಹೇಳಿರುತ್ತೇನೆಂದು ನುಡಿದಿರುತ್ತಾರೆ.

2 ಬಿಳಿ ಕ್ಯಾನುಗಳು ಸುಮಾರು 10 ಲೀ. ಸಾಮರ್ಥ್ಯ ಹೊಂದಿದ್ದವು. ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. 12 ಟ್ರೇಗಳಲ್ಲಿ 6 ನೀಲಿ ಬಣ್ಣದ್ದವು ಮತ್ತು 6 ಕೆಂಪು ಬಣ್ಣದ್ದಾಗಿದ್ದವು.

2 ಬಿಳಿ ಮಧ್ಯಸಾರ ವಾಸನೆಯುಳ್ಳ ಕ್ಯಾನುಗಳು, 12 ಪ್ಲಾಸ್ಟಿಕ್ ಟ್ರೇಗಳು, 3 ಬೂಚಗಳು (ಕ್ಯಾಪ್‌ಗಳು), 200 ಓರಿಜಿನಲ್ ಚಾಯ್ಸ್ ಕಂಪನಿಯ ಲೇಬಲ್‌ಗಳು ನಮ್ಮ ಕಚೇರಿಯಲ್ಲಿ ವಿಲೇವಾರಿ ಮಾಡಲು ಇಟ್ಟುಕೊಂಡ ವಸ್ತುಗಳು ಆಗಿದ್ದವು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಮೇಲಾಧಿಕಾರಿಗಳ ಹೇಳಿಕೆ ಮೇರೆಗೆ ಇಲ್ಲಿ ಇಂದು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿಃ 08-05-2008 ರಂದು ಬೆಳಿಗ್ಗೆ 7-00 ಗಂಟೆಗೆ ಗೋಕಾಕ ಅಬಕಾರಿ ಕಛೇರಿ ಬಿಟ್ಟು ನಾನು, ಚಾಸಾ 1, 5 ಮತ್ತು ಇಬ್ಬರು ಪಂಚರೊಂದಿಗೆ ಸರ್ಕಾರಿ ವಾಹನದಲ್ಲಿ 2008 ರ ಶಿಲ್ತಿಭಾವಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಶಿಲ್ತಿಭಾವಿಯ ಯಲ್ಲಪ್ಪ ಹಣಮಂತಪ್ಪ ಮಾಡಮ್‌ಗೇರಿ ಇವರ ಮನೆಯಲ್ಲಿ ಅಕ್ರಮ ಮಧ್ಯ ತಯಾರಿಕೆ ಮಾಡುತ್ತಿದ್ದಾರೆಂಬ ಖಚಿತ ಬಾತ್ಮಿ ಬಂದ ಮೇರೆಗೆ ಗ್ರಾಮದ ಜನರನ್ನು ವಿಚಾರಿಸುತ್ತಾ ನಾವು ಆರೋಪಿತನ ಮನೆಯ ಮುಂದೆ ಸರ್ಕಾರಿ ಜೀಪನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿದೆವು. ಅಷ್ಟರಲ್ಲಿ ನಾವು ಸಮವಸ್ತ್ರ ಧರಿಸಿದ್ದನ್ನು ನೋಡಿ ಆ ಮನೆಯಿಂದ ಒಬ್ಬ ವ್ಯಕ್ತಿ ಓಡಿ ಹೋದನು. ನಂತರ ಆತನ ಮೇಲೆ ಸಂಶಯ ಪಟ್ಟು ಮನೆಯನ್ನು ತಪಾಸಣೆ ಮಾಡಿದಾಗ ಆತನ ಮನೆಯ 2 ನೇ ಕೋಣೆಯಲ್ಲಿ 2 ಬಿಳಿ ಮಧ್ಯಸಾರ ವಾಸನೆಯುಳ್ಳ ಕ್ಯಾನುಗಳು, 12 ಪ್ಲಾಸ್ಟಿಕ್ ಟ್ರೇಗಳು, 3 ಬೂಚಗಳು (ಕ್ಯಾಪ್‌ಗಳು), 200 ಓರಿಜಿನಲ್ ಚಾಯ್ಸ್ ಕಂಪನಿಯ ಲೇಬಲ್‌ಗಳು ಕಂಡುಬಂದವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

2ನೇ ಹೆ.ದಿ.&ನ್ಯಾ.ದಂ.ಪ್ರ.ವರ್ಗ, ಗೋಕಾಕ.